# ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-560 001.

ನಿಗಮದ ಕೇಂದ್ರ ಕಛೇರಿಯಲ್ಲಿ ಶ್ರೀ ಎ.ಆರ್. ಕೃಷ್ಣಮೂರ್ತಿ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ 13.09.2011 ರಂದು ಮಧ್ಯಾಹ್ನ 3.00 ಗಂಟೆಗೆ ಜರುಗಿದ 186ನೇ ನಿರ್ದೇಶಕರ ಮಂಡಳಿ ಸಭೆಯ ಹಾಗೂ 36ನೇ ಸರ್ವ ಸದಸ್ಯರ ಸಭೆಯ ನಡವಳಿಗಳು:

| | |
|---|---|
| **ಉಪಸ್ಥಿತರು:** | |
| **ಹೆಸರು ಮತ್ತು ಪದನಾಮ:** | |
| ಶ್ರೀ ಎ.ಆರ್. ಕೃಷ್ಣಮೂರ್ತಿ | ಮಾನ್ಯ ಅಧ್ಯಕ್ಷರು |
| ಶ್ರೀ ಇ. ವೆಂಕಟಯ್ಯ, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಎಸ್. ಸರ್ಫರಾಜ್ ಖಾನ್, ಕೆ.ಸಿ.ಎ.ಎಸ್., | ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ ಶಿವಾನಂದ<br>ಸರ್ಕಾರದ ಅಧೀನ ಕಾರ್ಯದರ್ಶಿ<br>ಹಣಕಾಸು ಇಲಾಖೆ<br>ಕರ್ನಾಟಕ ಸರ್ಕಾರ | ರಾಜ್ಯಪಾಲರ ಪ್ರತಿನಿಧಿ |
| ಶ್ರೀ ನಾಗರಾಜ ಚವ್ಹಾಣ<br>ವ್ಯವಸ್ಥಾಪಕ ನಿರ್ದೇಶಕರು<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | ಸದಸ್ಯರು |
| **ಅನುಪಸ್ಥಿತರು:** | |
| ಶ್ರೀ ಎ. ಮುನಿಯಲ್ಲಪ್ಪ<br>ಅಪರ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ | ನಿರ್ದೇಶಕರು |
| ಶ್ರೀ ಎಂ.ಎ. ಹುಸೇನ್<br>ಉಪ ಕಾರ್ಯದರ್ಶಿಗಳು<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ<br>ಕರ್ನಾಟಕ ಸರ್ಕಾರ | ಸದಸ್ಯರು |
| ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು<br>ಅಭಿವೃದ್ಧಿ ನಿಗಮ, ನವದೆಹಲಿ<br>ಭಾರತ ಸರ್ಕಾರದ ಪ್ರತಿನಿಧಿ | ಸದಸ್ಯರು |

ಶ್ರೀ ಸರ್ಫರಾಜ್‌ಖಾನ್, ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಆಗಮಿಸಿದ್ದ ನಿಗಮದ ಮಾನ್ಯ ಅಧ್ಯಕ್ಷರು, ಶ್ರೀ ಇ. ವೆಂಕಟಯ್ಯ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಘನತೆವೆತ್ತ ರಾಜ್ಯಪಾಲರ ಪ್ರತಿನಿಧಿ ಶ್ರೀ ಶಿವಾನಂದ್, ಸರ್ಕಾರದ ಅಧೀನ ಕಾರ್ಯದರ್ಶಿ, ಹಣಕಾಸು ಇಲಾಖೆ ಹಾಗೂ ಶ್ರೀ ನಾಗರಾಜ ಚವ್ಹಾಣ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಇವರೆಲ್ಲರಿಗೂ ಹಾರ್ಧಿಕ ಸ್ವಾಗತ ಬಯಸಿದರು.

ನಿಗಮದ ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದ ಸಭಾ ಸದಸ್ಯರೆಲ್ಲರನ್ನು ಹಾರ್ಧಿಕವಾಗಿ ಸ್ವಾಗತಿಸಿದರು.

ಸಭೆಯ ಕಾರ್ಯಸೂಚಿಯನ್ನು ಚರ್ಚಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

**ವಿಷಯ ಸಂಖ್ಯೆ:1: 2010–11ನೇ ಸಾಲಿನ ನಿರ್ದೇಶಕರ ವರದಿಯನ್ನು ಅನುಮೋದಿಸುವ ಬಗ್ಗೆ.**

2010–11ನೇ ಸಾಲಿನ ಕರಡು ನಿರ್ದೇಶಕರ ವರದಿಯನ್ನು ಪರಿಶೀಲಿಸಿ ಚರ್ಚಿಸಲಾಯಿತು. ನಿಗಮದ ವಿವಿಧ ಯೋಜನೆಯಡಿ ಸಾಧಿಸಿರುವ ವರದಿಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳು ಒಂದೇ ತರಹದ ಚಟುವಟಿಕೆಗಳಿಗೆ ವಿವಿಧ ಯೋಜನೆಯಡಿ ಸೌಲಭ್ಯ ಕಲ್ಪಿಸಿರುವುದನ್ನು ಗಮನಿಸುತ್ತಾ ಫಲಾನುಭವಿಗಳಿಗೆ ಗೊಂದಲವಾಗುವುದನ್ನು ತಪ್ಪಿಸುವ ಸಲುವಾಗಿ ಯೋಜನೆಗಳ ಹೆಸರುಗಳನ್ನು ಮರುನಾಮಕರಣ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಪಾರದರ್ಶಕವಾಗಿ, ಸಾರಾಂಶವಾಗಿ, ಸೌಲಭ್ಯ ಕಲ್ಪಿಸುವ ಸ್ವರೂಪದೊಡನೆ ಯೋಜನೆಗಳನ್ನು ಪುನರ್‌ರಚಿಸುವುದಾಗಿ ವ್ಯವಸ್ಥಾಪಕ ನಿರ್ದೇಶಕರು ಭರವಸೆ ನೀಡಿದರು.

ಮಾನ್ಯ ಅಧ್ಯಕ್ಷರು ವಿದ್ಯಾಭ್ಯಾಸ ಸಾಲ ಪಡೆಯುವಲ್ಲಿ ಇರುವ ಗೊಂದಲಗಳ ಬಗ್ಗೆ ಸಭೆಯ ಗಮನಕ್ಕೆ ತಂದಾಗ, ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಕುಟುಂಬದ ವಾರ್ಷಿಕ ವರಮಾನವನ್ನು ರೂ.2.00 ಲಕ್ಷದ ವರೆಗೆ ನಿಗದಿಪಡಿಸಿ, ಉಚಿತ ಶಿಕ್ಷಣ ಹಾಗೂ ವಸತಿ ಸೌಲಭ್ಯ ಒದಗಿಸುತ್ತಿದ್ದರೂ ಸಹ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮವು ವಾರ್ಷಿಕ ವರಮಾನ ಕ್ರಮವಾಗಿ ರೂ.40,000/– ಗ್ರಾಮಾಂತರ ಪ್ರದೇಶಕ್ಕೆ ರೂ.50,000/– ನಗರ ಪ್ರದೇಶಕ್ಕೆ ನಿಗದಿಪಡಿಸಿ, ಉನ್ನತ ಶಿಕ್ಷಣ ಸಾಲ ಸೌಲಭ್ಯ ಒದಗಿಸುತ್ತಿದೆ. ಇದು ಸರಿಯಾದ ಕ್ರಮವಲ್ಲವೆಂದು ಅಭಿಪ್ರಾಯಿಸಿ, ಆಡಳಿತ ಮಂಡಳಿಗೆ ವಿದ್ಯಾಭ್ಯಾಸ ಸಾಲ ಕೋರಿ ಬರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಶುಲ್ಕ ಹಾಗೂ ವಿದ್ಯಾರ್ಥಿ ನಿಲಯಗಳ ಬಗ್ಗೆ ತಿಳುವಳಿಕೆ ಹೇಳಿ ಸಮಾಜ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಲು ತಿಳಿಸಿದರು. ಒಂದು ವೇಳೆ ವಿದ್ಯಾಸಂಸ್ಥೆಗಳು ಹೆಚ್ಚು ಶುಲ್ಕ ಕೇಳಿದ ಸಂದರ್ಭದಲ್ಲಿ ಸದರಿ ವಿದ್ಯಾರ್ಥಿಗಳು ಆ ವಿದ್ಯಾಸಂಸ್ಥೆಗಳು ನೀಡುವ ಷರಾದೊಂದಿಗೆ ವಿದ್ಯಾಭ್ಯಾಸ ಸಾಲಕ್ಕಾಗಿ ನಿಗಮವನ್ನು ಸಂಧಿಸಿದಾಗ ಮುಂದಿನ ಕ್ರಮಕೈಗೊಳ್ಳಬಹುದೆಂದು ಅಭಿಪ್ರಾಯಪಟ್ಟರು.

ಮಾನ್ಯ ಅಧ್ಯಕ್ಷರು ಇತ್ತೀಚೆಗೆ ನವದೆಹಲಿಯಲ್ಲಿರುವ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿದ ಸಂದರ್ಭದಲ್ಲಿ ನಿಗಮದ ಮರುಪಾವತಿ ತೀರಾ ಕಡಿಮೆ ಇದೆ, ಮರುಪಾವತಿಯ ಪ್ರಮಾಣವನ್ನು ಶೇ.50ರಷ್ಟಕ್ಕೆ ಹೆಚ್ಚಿಸದಿದ್ದಲ್ಲಿ ನಿಗಮದಿಂದ ಅವಧಿಸಾಲ ಕೋರಿ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ಆದುದರಿಂದ, ವಸೂಲಾತಿಯನ್ನು ಚುರುಕುಗೊಳಿಸುವಂತೆ ಸೂಚಿಸಿದರು.

ಇದಲ್ಲದೇ, ಹಿಂದಿನ ನಿರ್ದೇಶಕರ ಮಂಡಳಿಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ನಿಗಮದಲ್ಲಿರುವ ಎಲ್ಲಾ ಕಂಪ್ಯೂಟರ್‌ಗಳನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ಎಲ್ಲಾ ಜಿಲ್ಲಾ ಕಛೇರಿಗಳಿಗೆ ಒದಗಿಸಿರುವ ಕಂಪ್ಯೂಟರ್‌ಗಳಿಗೆ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಿ, ನಿಗಮಕ್ಕೆ ತಕ್ಕುದಾದ ಡಿ.ಸಿ.ಬಿ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಿದಲ್ಲಿ ಯೋಜನೆಗಳಡಿ ಸಾಲಸೌಲಭ್ಯ ಪಡೆದ ಫಲಾನುಭವಿಗಳ ಲೆಕ್ಕಗಳನ್ನು ಕೇಂದ್ರ ಕಛೇರಿಯಿಂದ ಮೇಲುಸ್ತುವಾರಿ ಮಾಡಲು ಸಾಧ್ಯವಾಗುವುದಲ್ಲದೆ ಮರುಪಾವತಿಯನ್ನು ಹೆಚ್ಚಿಸಲು ಸಹಕಾರಿಯಾಗುವುದರಿಂದ, ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

.. 3

ಇನ್ನಿತರ ವಿಷಯಗಳ ಬಗ್ಗೆ ಪರಿಶೀಲಿಸಿದ ನಿರ್ದೇಶಕರ ಮಂಡಳಿಯು ನಿರ್ದೇಶಕರ ವರದಿಯನ್ನು ಈ ಕೆಳಕಂಡ ಠರಾವಿನೊಂದಿಗೆ ಅನುಮೋದಿಸಿತು:

"2010–11ನೇ ಸಾಲಿನ ಕರಡು ನಿರ್ದೇಶಕರ ವರದಿಯ ಜೊತೆಗೆ ಲಗತ್ತಿಸಿದ ಅನುಬಂಧದಲ್ಲಿ ಒಳಗೊಂಡ ಶಾಸನಬದ್ಧ ಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿದ ಉತ್ತರವನ್ನು ಅನುಮೋದಿಸಿ ಮತ್ತು ಅದಕ್ಕೆ ಕಂಪನಿ ಕಾಯಿದೆ 1956ರ ನಿಯಮ 217ರ ಅಧಿನಿಯಮ (4)ರ ಪ್ರಕಾರ ನಿಗಮದ ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು ಅಥವಾ ಒಬ್ಬರು ನಿರ್ದೇಶಕರು ಸಹಿ ಹಾಕಲು ತೀರ್ಮಾನಿಸಲಾಯಿತು"

**ವಿಷಯ ಸಂಖ್ಯೆ:2: ಷೇರು ಬಂಡವಾಳ ಪ್ರಮಾಣ ಪತ್ರವನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಕ್ಕೆ ನೀಡುವ ಬಗ್ಗೆ.**

ನಿರ್ದೇಶಕರ ಮಂಡಳಿಯು ಸದರಿ ಪ್ರಸ್ತಾವನೆಯನ್ನು ಅನುಮೋದಿಸಿ, ಷೇರು ಬಂಡವಾಳವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿ ಪ್ರಮಾಣ ಪತ್ರವನ್ನು ನಿಗಮದ ಸಾಮಾನ್ಯ ಸೀಲು ಹಾಗೂ ಸಹಿಯೊಂದಿಗೆ ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧ್ಯಕ್ಷರಿಗೆ ಅಧಿಕಾರವನ್ನು ನೀಡಿತು.

| ಕ್ರಮ ಸಂಖ್ಯೆ | | ತಲಾ ರೂ.10/–ರಂತೆ ಒಟ್ಟು ಷೇರುಗಳ ಸಂಖ್ಯೆ |
|---|---|---|
| 1 | ಕರ್ನಾಟಕದ ರಾಜ್ಯಪಾಲರು | 30,00,000 |
| 2 | ಭಾರತದ ರಾಷ್ಟ್ರಪತಿಗಳು | 30,00,000 |
| | ಒಟ್ಟು | 60,00,000 |

**ವಿಷಯ ಸಂಖ್ಯೆ:3: ಅನುಕಂಪದ ಮೇರೆಗೆ 'ಸಿ' ದರ್ಜೆಯ ಹುದ್ದೆಯನ್ನು ನೀಡುವ ಬಗ್ಗೆ.**

ಶ್ರೀಮತಿ ನಿಂಗಮ್ಮ ಕೋಂ ಲೇಟ್ ಶ್ರೀ ಬಿರಾದಾರ್, (ಹಿಂದೆ ಗುಲ್ಬರ್ಗಾದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ 5.01.2011ರಂದು ದೈವಾಧೀನರಾಗಿರುತ್ತಾರೆ) ಅನುಕಂಪದ ಆಧಾರದ ಮೇಲೆ ತಮಗೆ ನಿಗಮದಲ್ಲಿ ಕೆಲಸ ನೀಡಲು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆಂದು ನಿರ್ದೇಶಕರ ಮಂಡಳಿ ಸಭೆಯ ಗಮನಕ್ಕೆ ತಂದರು. ಕೆ.ಸಿ.ಎಸ್.ಆರ್. ನಿಯಮ3(2)(9)ರ ಡಿಪಿಎಆರ್ 100 ಎಸ್‌ಸಿಎ 96 (ಬೆಂಗಳೂರು) ದಿನಾಂಕ 12.09.1996ರಂತೆ ಸದರಿ ಅರ್ಜಿದಾರರು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಅರ್ಹರಿರುತ್ತಾರೆ ಹಾಗೂ ನಿಯಮ 6(1)ರ ಕೆ.ಸಿ.ಎಸ್.ಆರ್ 1977 ರಂತೆ ವಯಸ್ಸಿನ ರಿಯಾಯಿತಿಯಲ್ಲಿ ಅರ್ಹರಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಅರ್ಜಿದಾರರು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವುದರಿಂದ ಇವರು ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಳ್ಳಲು ಅರ್ಹರಿರುತ್ತಾರೆಂದು, ಅಲ್ಲದೇ ಈಗಾಗಲೇ ನಿಗಮದಲ್ಲಿ 32 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಎದುರಾಗಿ 42 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿದರು. ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಿರುವುದರಿಂದ, ನಿರ್ದೇಶಕರ ಮಂಡಳಿಯು ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಶ್ರೀಮತಿ ನಿಂಗಮ್ಮ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರಾಗಿ ನಿಯಮ3(2)(9)ರ ಡಿಪಿಎಆರ್ 100 ಎಸ್‌ಸಿಎ 96 (ಬೆಂಗಳೂರು) ದಿನಾಂಕ 12.09.1996ರಂತೆ ಗ್ರೂಪ್ ಸಿ ವರ್ಗದಲ್ಲಿ ಇರುವ ಖಾಲಿ ಹುದ್ದೆಯಲ್ಲಿ ಅವರ ವಿದ್ಯಾರ್ಹತೆ ಮೇಲೆ ನೇಮಿಸಿಕೊಳ್ಳಲು ಶಿಫಾರಸ್ಸು ಮಾಡಲು ತೀರ್ಮಾನಿಸಿತು.

.. 4

**ವಿಷಯ ಸಂಖ್ಯೆ:4: ಶ್ರೀ ಎಂ.ಎಸ್. ಪರಮೇಶ್, ಅಧೀಕ್ಷಕರು (ಪ್ರತಿ ನಿಯೋಜನೆ), ಎನ್.ಜಿ.ಎ.ಎಫ್. ಸಂಸ್ಥೆ, ಇವರ ಸೇವೆಯನ್ನು ನಿಗಮದ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ.**

ನಿರ್ದೇಶಕರ ಮಂಡಳಿಯು ಈ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ, ದಾಖಲಾತಿಗಳನ್ನು ಪರಿಶೀಲಿಸಿ, ಎಲ್ಲಾ ವಿವರಗಳನ್ನು ಕಾಲಾನುಸಾರವಾಗಿ ಮಂಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸಲಹೆಯನ್ನು ನೀಡಿತು.

**ವಿಷಯ ಸಂಖ್ಯೆ:5: ಮೈಕ್ರೋ ಕ್ರೆಡಿಟ್/ಮಹಿಳಾ ಸಮೃದ್ಧಿ ಯೋಜನೆ 1ರಡಿ 2010–11ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ ಮತ್ತು ಬಿಬಿಎಂಪಿ/ಸಕಇ/ಇತರೆ ಇಲಾಖೆಗಳಿಂದ ಸಹಾಯಧನ ಬಂದಿರುವ ಮತ್ತು ಸಹಾಯಧನ ಬಿಡುಗಡೆ ಮಾಡಲು ಒಪ್ಪಿಗೆ ನೀಡಿರುವ ಸಹಾಯಧನ ಬಂದಿಲ್ಲದ ಪ್ರಸ್ತಾವನೆಗಳಿಗೆ ಸಾಲಸೌಲಭ್ಯ ಕೋರಿ ಬಂದಿರುವ ಪ್ರಸ್ತಾವನೆಗಳಿಗೆ ನಿರ್ದೇಶಕರ ಮಂಡಳಿ ತೀರ್ಮಾನ ಕೋರಿ.**

ಮಾನ್ಯ ಅಧ್ಯಕ್ಷರು 2010–11ನೇ ಸಾಲಿನಲ್ಲಿ ನಿರ್ದೇಶಕರ ಮಂಡಳಿ ಸಭೆಯ ಗಮನಕ್ಕೆ ತರದೆ ಎಂ.ಸಿ.ಎಫ್ ಯೋಜನೆಯಡಿ 2710 ಹಾಗೂ ಮಹಿಳಾ ಸಮೃದ್ಧಿ ಯೋಜನೆಯಡಿ 1278 ಒಟ್ಟಾರೆ 3988 ಜನರಿಗೆ ಗುರಿ ಮೀರಿ ಮಂಜೂರಾತಿಯನ್ನು ನೀಡಲಾಗಿದೆ. ಇದರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿಯ ಸುಮಾರು 3902 ಜನರಿಗೆ ಮಂಜೂರಾತಿಯನ್ನು ನೀಡಲಾಗಿದೆ ಎಂದು ಇದನ್ನು ತನಿಖೆಗೆ ಒಳಪಡಿಸಬೇಕೆಂದು ತಿಳಿಸಿದರು. ನಿರ್ದೇಶಕರ ಮಂಡಳಿಯು ನಿಗಮದ ಅಧಿಕಾರಿಗಳಿಗೆ ಸೂಚನೆಯನ್ನು ನೀಡುತ್ತಾ ಸದರಿ ಪ್ರಕರಣಗಳನ್ನು ತಡೆಹಿಡಿಯಲು ಹಾಗೂ ನೈಜ ಘಟನೆಗಳನ್ನು ಮಂಡಳಿಯ ಗಮನಕ್ಕೆ ತರಲು ಸೂಚನೆ ನೀಡಿತು. ವ್ಯವಸ್ಥಾಪಕ ನಿರ್ದೇಶಕರವರು ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿ ವಿರುದ್ಧ ಕಾನೂನು ಪ್ರಕಾರ ಮೊಕದ್ದಮೆ ಜರುಗಿಸಲು ನಿರ್ದೇಶಕ ಮಂಡಳಿ ಮುಂದೆ ಮಂಡಿಸುವುದು.

**ವಿಷಯ ಸಂಖ್ಯೆ:6: ಶ್ರೀ ಡಿ. ಲಿಂಗರಾಜು ಬಿನ್ ದೊಡ್ಡ ಈರಪ್ಪ, ಬ್ಯಾಡರಹಳ್ಳಿ, ಬೆಂಗಳೂರು ಇವರಿಗೆ ನೇರಸಾಲ ಯೋಜನೆಯಡಿ ಆಟೋರಿಕ್ಷಾ ಉದ್ದೇಶಕ್ಕೆ ಪಡೆದ ಸಾಲವನ್ನು ಓ.ಟಿ.ಎಸ್., ಯೋಜನೆಯಡಿ ಮನ್ನಾ ಮಾಡುವ ಬಗ್ಗೆ.**

ಶ್ರೀ ಡಿ. ಲಿಂಗರಾಜು ಬಿನ್ ದೊಡ್ಡ ಈರಪ್ಪ, ಬ್ಯಾಡರಹಳ್ಳಿ, ಬೆಂಗಳೂರು ಇವರಿಗೆ ನೇರಸಾಲ ಯೋಜನೆಯಡಿ ಆಟೋರಿಕ್ಷಾ ಉದ್ದೇಶಕ್ಕೆ 2006–07ನೇ ಸಾಲಿನಲ್ಲಿ ಅವಧಿಸಾಲ ಮತ್ತು ಅಂಚಿನ ಹಣ ಕ್ರಮವಾಗಿ ರೂ.21,000/– ಮತ್ತು ರೂ.71,000/– ಒಟ್ಟು ರೂ.92,000/–ಗಳನ್ನು ಮಂಜೂರು ಮಾಡಲಾಗಿತ್ತು. ದಿನಾಂಕ 27.08.2011ರ ಅಂತ್ಯಕ್ಕೆ ರೂ.38,840/– ನಿಗಮಕ್ಕೆ ಪಾವತಿಸಿದ್ದು, ಉಳಿಕೆ ಮೊತ್ತವನ್ನು ಓ.ಟಿ.ಎಸ್.ನಡಿ ಬಡ್ಡಿ ಮನ್ನಾ ಮಾಡಿದಲ್ಲಿ ಬಾಕಿ ಹಣವನ್ನು ಕಟ್ಟುವುದಾಗಿ ಫಲಾನುಭವಿ ದಿನಾಂಕ 25.08.2011ರಂದು ಮನವಿ ಸಲ್ಲಿಸಿದ್ದು, ಅದರಂತೆ ಲೆಕ್ಕಹಾಕಿ ಓ.ಟಿ.ಎಸ್.,ನಡಿ ರೂ.6,029/–ಗಳನ್ನು ಬಡ್ಡಿ ಮನ್ನಾಮಾಡಿ ಉಳಿಕೆ ಹಣ ರೂ.71,868/–ಗಳನ್ನು ನಿಗಮಕ್ಕೆ ಮರುಪಾವತಿಸಿಕೊಳ್ಳಲು ಕೈಗೊಂಡ ಕ್ರಮಕ್ಕೆ ನಿರ್ದೇಶಕರ ಮಂಡಳಿಯು ಘಟನೋತ್ತರ ಅನುಮತಿ ನೀಡಿತು.